Sri SAIRAM
PRE-UNIVERSITY COLLEGE
Anekal, Bengaluru

MJF.LN. LEO MUTHU
Founder Chairman - Sairam Institutions


# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**Date: 16.06.2017** **Edition: Bengaluru**

**Newspaper - Prajavani**


## ‘ಶಿಕ್ಷಣ ಜ್ಞಾನದ ಬಾಗಿಲು ತೆಗೆಯುವ ಕೀಲಿ ಕೈ’

ಪ್ರಜಾವಾಣಿ ವಾರ್ತೆ

ಆನೇಕಲ್: ‘ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಕ್ರಮಬದ್ಧ ರೀತಿಯಲ್ಲಿ ವ್ಯಾಸಂಗ ಮಾಡಿ ಶ್ರಮಪಟ್ಟರೆ ಕಂಡಕನಸು ನನಸಾಗುತ್ತದೆ’ ಎಂದು ಬೆಂಗಳೂರಿನ ವಿಜಯ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲ ಎಸ್.ಚಂದ್ರಶೇಖರ್ ಸಲಹೆ ಮಾಡಿದರು.

ತಾಲ್ಲೂಕಿನ ಗುಡ್ಡನಹಳ್ಳಿ ಸಮೀಪದ ಶ್ರೀಸಾಯಿರಾಮ್ ಪದವಿಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ತರಗತಿಗಳ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಶಿಕ್ಷಣ ಎಂಬುದು ಜ್ಞಾನದ ಬಾಗಿಲುಗಳನ್ನು ತೆಗೆಯುವ ಕೀಲಿ ಕೈ ಇದ್ದಂತೆ, ಹಾಗಾಗಿ ವಿದ್ಯಾರ್ಥಿಗಳು ಸಂಶೋಧನೆ, ಅನ್ವೇಷಣೆಯಂತಹ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದರು.

ಶ್ರೀ ಸಾಯಿರಾಮ್ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಪ್ರತಿನಿಧಿ ಡಾ.ಆರ್. ಅರುಣ್‌ಕುಮಾರ್ ಮಾತನಾಡಿ, ವಿಜ್ಞಾನ ವಿಭಾಗದಲ್ಲಿ ಅತಿ ಹೆಚ್ಚು ಅಂಕಗಳಿಸುವ ವಿದ್ಯಾರ್ಥಿಗಳಿಗೆ 4 ವರ್ಷಗಳ ಕಾಲ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಚಿತ ಶಿಕ್ಷಣ ನೀಡಲು ಸಂಸ್ಥೆಯ ಸಿಇಒ ಸಾಯಿಪ್ರಕಾಶ್ ಲಿಯೋ ಮುತ್ತು ಅವಕಾಶ ಕಲ್ಪಿಸಿದ್ದಾರೆ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ಆರ್. ಮುನಿರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಿಸಲು ನಮ್ಮ ಕಾಲೇಜು ಬದ್ಧವಾಗಿರುತ್ತದೆ. ಕಾಲೇಜಿನಲ್ಲಿ ಶಿಸ್ತಿನ ಜತೆ ಶೈಕ್ಷಣಿಕ ಚಟುವಟಿಕೆ ನಡೆಸುವುದಾಗಿ ತಿಳಿಸಿದರು.

ಕಾಲೇಜಿನ ಉಪ ಪ್ರಾಚಾರ್ಯ ಡಾ.ಬಿ.ಷಡಕ್ಷರಪ್ಪ ಹಾಜರಿದ್ದರು. ಶ್ರೇಷ್ಠ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮಾಹಿತಿ ಒದಗಿಸುವ ಕಾಲೇಜಿನ ಜಾಲತಾಣವನ್ನು ಬಿಡುಗಡೆ ಮಾಡಲಾಯಿತು.




ಆನೇಕಲ್ ತಾಲ್ಲೂಕಿನ ಗುಡ್ಡನಹಳ್ಳಿ ಸಮೀಪದ ಶ್ರೀಸಾಯಿರಾಮ್ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿ ಸೈಯದ್ ಅಬ್ಸಾನ ಅವರನ್ನು ಸನ್ಮಾನಿಸಲಾಯಿತು

Sri **SAIRAM**
**PRE-UNIVERSITY COLLEGE**
Anekal, Bengaluru

MJF.LN. LEO MUTHU
Founder Chairman - Sairam Institutions

# ವಿಜಯ ಕರ್ನಾಟಕ

**Date: 17.06.2017** **Edition: Bengaluru**

## Newspaper - Vijaya Karnataka

# ಕ್ರಮಬದ್ಧ ವ್ಯಾಸಂಗದಿಂದ ಯಶಸ್ಸು: ಪ್ರಾಂಶುಪಾಲ

**ವಿಕ ಸುದ್ದಿಲೋಕ** ಆನೇಕಲ್

ವಿದ್ಯಾರ್ಥಿಗಳು ಕ್ರಮಬದ್ಧ ರೀತಿಯಲ್ಲಿ ವ್ಯಾಸಂಗ ಮಾಡಿದರೆ ಕಂಡಕನಸು ನನಸಾಗುವುದರ ಜತೆ ಅವರ ಬದುಕು ಹಸನಾಗುತ್ತದೆ ಎಂದು ಬೆಂಗಳೂರಿನ ವಿಜಯ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲ ಎಸ್. ಚಂದ್ರಶೇಖರ್ ಹೇಳಿದ್ದಾರೆ.

ಇಲ್ಲಿಗೆ ಸಮೀಪದ ಗುಡ್ಡನಹಳ್ಳಿ ಬಳಿಯಿರುವ ಶ್ರೀ ಸಾಯಿರಾಮ್ ಪದವಿಪೂರ್ವ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮಾಹಿತಿ ಒದಗಿಸುವ ಕಾಲೇಜಿನ ಜಾಲತಾಣ(ವೆಬ್‌ಸೈಟ್) ಹಾಗೂ ಪ್ರಥಮ ಪಿಯುಸಿ ತರಗತಿಗಳ ಪ್ರಾರಂಭೋತ್ಸವ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಕ್ರಮ ಬದ್ಧ ಅಧ್ಯಯನ ಮುಖ್ಯ. ಪುಸ್ತಕದಲ್ಲಿನ ಅಕ್ಷರಗಳು ನಮ್ಮ ಮಸ್ತಕದಲ್ಲಿ ಮುದ್ರಣಗೊಳ್ಳಬೇಕು. ಇದರಿಂದ ಜೀವಂತ ಇರುವಷ್ಟು ದಿನವೂ ನಾವು ಓದಿದ್ದು ನೆನಪಲ್ಲಿರುತ್ತೆ. ಇದು ಬಾಳನ್ನು ಬಂಗಾರ ಮಾಡಲು ನೆರವಾಗುತ್ತದೆ ಎಂದರು.

ಶ್ರೀಸಾಯಿರಾಮ್ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಪ್ರತಿನಿಧಿ ಡಾ. ಆರ್.ಅರುಣ್‌ಕುಮಾರ್ ಮಾತನಾಡಿ, ಶೈಕ್ಷಣಿಕ ಕ್ಷೇತ್ರದ ಬದ್ಧತೆಯ ಬಗ್ಗೆ ವಿವರಿಸಿದರು. ಪ್ರವೇಶಾತಿ ಪಡೆದ ಮಕ್ಕಳ ಭವಿಷ್ಯವನ್ನು ರೂಪಿಸುವ ಬಗ್ಗೆ ಶಿಕ್ಷಣ ಸಂಸ್ಥೆಯಲ್ಲಿ ಕೈಗೊಳ್ಳುವ ಕಾರ್ಯಯೋಜನೆಗಳನ್ನು ಪೋಷಕರಿಗೆ ತಿಳಿಸಿದರು. ಇದೇ ಕಾಲೇಜಿನಲ್ಲಿ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ 4 ವರ್ಷ ಕಾಲ ಉಚಿತವಾಗಿ ಬಿಇ (ಇಂಜಿನಿಯರಿಂಗ್) ಶಿಕ್ಷಣ ನೀಡಲಾಗುವುದು. ಸಾಯಿರಾಮ್ ಶಿಕ್ಷಣ ಸಂಸ್ಥೆಯ ಸಿಇಒ ಸಾಯಿ ಪ್ರಕಾಶ್ ಲಿಯೋಮುತ್ತುರವರು ಇಂತಹ ಅವಕಾಶ ನೀಡಿದ್ದಾರೆ ಎಂದರಲ್ಲದೆ, ಈ ಬಾರಿ ವಾಣಿಜ್ಯ ವಿಭಾಗದಲ್ಲಿ ಶೇ. 100ರಷ್ಟು ಫಲಿತಾಂಶ ಬಂದಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಆರ್. ಮುನಿರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಿಸಲು ನಮ್ಮ ಕಾಲೇಜು ಬದ್ಧವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಶಿಸ್ತಿನ ಜತೆ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವುದಾಗಿ ಹೇಳಿದರು.

ಶ್ರೀಸಾಯಿರಾಮ್ ಇಂಜಿನಿಯರಿಂಗ್ ಕಾಲೇಜಿನ ಉಪಪ್ರಾಂಶುಪಾಲ ಡಾ.ಬಿ.ಷಡಕ್ಷರಪ್ಪ ಕಾಲೇಜಿನ ಶಿಸ್ತು, ಫಲಿತಾಂಶ ಮತ್ತು ವಿದ್ಯಾರ್ಥಿಗಳ ಸಾಧನೆಯನ್ನು ಪ್ರಶಂಶಿಸಿದರು.

2016-17ನೇ ಸಾಲಿನಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.



ಆನೇಕಲ್ ಸಮೀಪದ ಶ್ರೀಸಾಯಿರಾಮ್ ಪದವಿಪೂರ್ವ ಕಾಲೇಜಿನಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

# Sri SAIRAM PRE-UNIVERSITY COLLEGE

Anekal, Bengaluru

MJF.LN. LEO MUTHU
Founder Chairman - Sairam Institutions

# ವಿಜಯವಾಣಿ

ಕನ್ನಡಿಗರ ಧ್ವನಿ

**Date: 16.06.2017** **Edition: Bengaluru**

## Newspaper - Vijayavani

# ಪಿಯುಸಿ ಪ್ರಾರಂಭೋತ್ಸವ

■ ವಿಜಯವಾಣಿ ಸುದ್ದಿಜಾಲ ಆನೇಕಲ್

ಸಾಯಿರಾಮ್ ಪದವಿಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಪ್ರಾರಂಭೋತ್ಸವ ನೆರವೇರಿತು. ಬೆಂಗಳೂರಿನ ವಿಜಯ ಪಿಯು ಕಾಲೇಜು ಪ್ರಾಂಶುಪಾಲ . ಎಸ್.ಚಂದ್ರಶೇಖರ್, ಕಾಲೇಜಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮಾಹಿತಿ ಒಳಗೊಂಡ ವೆಬ್‌ಸೈಟ್ ಅನಾವರಣಗೊಳಿಸಿ, ಕ್ರಮಬದ್ಧವಾಗಿ ವಿದ್ಯಾಭ್ಯಾಸ ನಡೆಸಿದರೆ ಕನಸು ನನಸಾಗುತ್ತದೆ ಎಂದರು. ಉಪಪ್ರಾಶುಂಪಾಲ ಡಾ.ಬಿ.ಷಡಕ್ಷರಪ್ಪ ಮಾತನಾಡಿ ಶಿಸ್ತು, ಫಲಿತಾಂಶ ಮತ್ತು ಸಾಧನೆಯಿಂದ ಭವಿಷ್ಯ ಉತ್ತಮವಾಗಿರುತ್ತದೆ ಎಂದರು. ಸಾಯಿರಾಮ ಸಮೂಹ ಶಿಕ್ಷಣ ಸಂಸ್ಥೆ ಪ್ರತಿನಿಧಿ ಡಾ.ಆರ್. ಅರುಣ್ ಕುಮಾರ್ ಮಾತನಾಡಿದರು. ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸಾಯಿರಾಂ ಪಿಯು ಕಾಲೇಜು ಪ್ರಾಂಶುಪಾಲ ಮುನಿರೆಡ್ಡಿ ಸನ್ಮಾನಿಸಿದರು.

ವಿಜಯವಾಣಿ ಚಿತ್ರ



ಆನೇಕಲ್ ತಾಲೂಕಿನ ಸಾಯಿರಾಮ್ ಪದವಿಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಪ್ರಾರಂಭೋತ್ಸವದಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

Sri SAIRAM
PRE-UNIVERSITY COLLEGE
Anekal, Bengaluru

MJF. LN. LEO MUTHU
Founder Chairman - Sairam Institutions

# ವಿಜಯ ಕರ್ನಾಟಕ

**Date: 29.05.2017** **Edition: Bengaluru**

## Newspaper - Vijaya Karnataka



ಪಿಯುಸಿ ಟಾಪರ್ಸ್

ಸಾಯಿರಾಮ್ ಪದವಿಪೂರ್ವ ಕಾಲೇಜು, ಆನೇಕಲ್

ಮಧುರಿಕ ಅಗರ್ವಾಲ್ 98.00%

ಸೈಯದ್ ಅಪ್ಸನಾ ಎ 92.00%

ಉಪೇಂದ್ರ ವಿ 91.00%

ರಾಗಶ್ರೀ ಎನ್ 91.00%

ವಿನುತಾ ಜಿ 91.00%

ಶಶಿಕುಮಾರ್ ಎಮ್ 90.00%